ದಿನಾಂಕ 04.07.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ. ಎಸ್.ಎಲ್.ಎ ವಕೀಲರಿಂದಃ

ನಾನು ಶಾಲೆಗೆ ಹೋಗಿರುವುದಿಲ್ಲ. ನನಗೆ ಕನ್ನಡ ಸ್ವಲ್ಪ ಓದಲು ಬರೆಯಲು ಬರುತ್ತದೆ. ಈಗ ನಾವು ಬೆಳಾಲು ಅಳಿಕೆಗದ್ದೆ ಮನೆಯಲ್ಲಿ ವಾಸವಿದ್ದೇವೆ. ಅದು ನನ್ನ ಗಂಡನ ಮನೆ. ನನಗೆ ಮದುವೆಯಾಗಿ 40 ವರ್ಷಗಳಾಗಿರುತ್ತದೆ. ಮದುವೆಯಾದ ನಂತರ ನಾನು ಬೆಳಾಲು ಅಳಿಕೆಗದ್ದೆಯಲ್ಲಿರುವ ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ ಆದರೆ ನನ್ನ ತಂದೆ ಮನೆಗೂ ಸಹ ಹೋಗಿ ಬರುತ್ತಿದ್ದೇನೆ. ತಂದೆಯ ಮನೆಗೆ ವರ್ಷಕ್ಕೆ ಒಮ್ಮೆ ಹೋಗುತ್ತೀರಾ ಎಂದರೆ ಸಾಕ್ಷಿ ಕೆಲಸ ಇದ್ದಾಗ ಹೋಗುತ್ತೇವೆ ಎಂದು ಹೇಳುತ್ತಾರೆ.

2. ನನ್ನ ತಂದೆ ತಾಯಿಗೆ 11 ಜನ ಮಕ್ಕಳು. ಅವರಲ್ಲಿ ಎರಡು ಜನ ತೀರಿದ್ದಾರೆ. ಅವರಲ್ಲಿ ಒಬ್ಬರಿಗೆ ಮದುವೆಯಾಗಿರುವುದಿಲ್ಲ, ಇನ್ನೊಬ್ಬರಿಗೆ ಮದುವೆಯಾಗಿ ಮಕ್ಕಳು ಇದ್ದಾರೆ. 1 ಮತ್ತು 2 ನೇ ಪ್ರತಿವಾದಿಯರು ನನ್ನ ತಮ್ಮಂದಿರು. 2021 ರಿಂದ ನನ್ನ ಮತ್ತು 1 ಮತ್ತು 2 ನೇ ಪ್ರತಿವಾದಿಯರ ನಡುವೆ ಸಂಬಂಧ ಚೆನ್ನಾಗಿಲ್ಲ. ಏನು ಕಾರಣ ಎಂದರೆ ಸಾಕ್ಷಿ ನಾವು ಪಾಲನ್ನು ಕೇಳಿದಾಗ 1 ಮತ್ತು 2 ನೇ ಪ್ರತಿವಾದಿಯರು ನಿಮಗೆ ಪಾಲು ಇಲ್ಲ ನಮ್ಮ ಹೆಸರಿನಲ್ಲಿ ವಿಲ್‌ನ್ನು ಮಾಡಿಕೊಂಡಿದ್ದೇವೆ ಎಂದು ಹೇಳಿದ್ದರು. ನಾವು ಆರ್.ಟಿ.ಸಿ ನೋಡಿದಾಗ ನಮ್ಮ ಹೆಸರು ಅದರಲ್ಲಿ ಇರಲಿಲ್ಲ. ಆದ ಕಾರಣ ಮಾತುಕತೆ ಇರುವುದಿಲ್ಲ. ನೀವು ಯಾವಾಗ ಪಾಲು ಕೇಳಿದ್ದೀರಿ ಎಂದರೆ ಒಂದನೇ ವಾರ ಆಗಸ್ಟ್ ತಿಂಗಳ 2021 ರಲ್ಲಿ ಪಾಲನ್ನು ಕೇಳಿದ್ದೆವು. ಯಾರಲ್ಲಿ ಕೇಳಿದ್ದಿರಿ ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರ ಹತ್ತಿರ ಕೇಳಿದ್ದೆವು. ಆಗ 1 ಮತ್ತು 2 ನೇ ಪ್ರತಿವಾದಿಯರು ಅವರ ಮನೆಯಲ್ಲಿ ಇದ್ದರು. ದಾವಾ ಸ್ವತ್ತಿನಲ್ಲಿ ಒಟ್ಟು ಎಷ್ಟು ಮನೆ ಇದೆ ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಗೆ ಸೇರಿದ ಎರಡು ಮನೆಗಳು ಇವೆ ಎಂದು ಹೇಳುತ್ತಾರೆ. ನನ್ನ ತಂದೆ ತಾಯಿ ಇದ್ದ ಮನೆಯಲ್ಲಿಯೇ ಈಗ 2 ನೇ ಪ್ರತಿವಾದಿ, 4 ನೇ ಪ್ರತಿವಾದಿ ಹಾಗೂ 7 ನೇ ಪ್ರತಿವಾದಿ ವಾಸವಿದ್ದಾರೆ. 7 ನೇ ಪ್ರತಿವಾದಿಗೆ ಮದುವೆಯಾಗಿರುವುದಿಲ್ಲ. 4 ನೇ ಪ್ರತಿವಾದಿಗೂ ಸಹ ಮದುವೆಯಾಗಿರುವುದಿಲ್ಲ. 4 ಮತ್ತು 7 ನೇ

ಪ್ರತಿವಾದಿಯರಿಗೆ ಮಾನಸಿಕವಾಗಿ ಆರೋಗ್ಯ ಸರಿ ಇರುವುದಿಲ್ಲ. 4 ನೇ ಪ್ರತಿವಾದಿ ಮಲಗಿದಲ್ಲಿಯೇ ಇರುತ್ತಾರೆ.

3. ದಾವೆ ಹಾಕಲು ವಕೀಲರಿಗೆ ನಾನೇ ಅನುಭವ ಕೊಟ್ಟಿರುತ್ತೇನೆ. ದಾವಾ ಸ್ವತ್ತು ತಂದೆಯವರಿಗೆ ಹೇಗೆ ಬಂದಿತ್ತು ಎಂದರೆ ಸಾಕ್ಷಿ ನನ್ನ ತಂದೆಯವರು ಡಿಕ್ಲೇರೇಶನ್ ನೀಡಿದಾಗ ಮರಣಹೊಂದಿದ್ದು ಆನಂತರ ನನ್ನ ತಾಯಿ ಹೆಸರಿಗೆ ಮಂಜೂರಾಗಿರುತ್ತದೆ. ನನ್ನ ತಂದೆಯವರು ತೀರಿ 40 ವರ್ಷಗಳಾಗಿರುತ್ತದೆ. ನನ್ನ ತಾಯಿಯವರು ತೀರಿ 15 ವರ್ಷಗಳಾಗಿರುತ್ತದೆ. ನಿಮ್ಮ ಪ್ರಕಾರ ದಾವಾ ಸ್ವತ್ತು ಯಾರದ್ದು ಎಂದರೆ ಸಾಕ್ಷಿ ನನ್ನ ತಾಯಿಯದ್ದು ಎಂದು ಹೇಳುತ್ತಾರೆ. ನನ್ನ ತಂದೆ ತೀರಿದ ನಂತರ ನನ್ನ ತಾಯಿಯೊಟ್ಟಿಗೆ 1, 2, 4 ಮತ್ತು 7 ನೇ ಪ್ರತಿವಾದಿ ವಾಸವಿದ್ದರು. 7 ನೇ ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ನನ್ನ ಎಲ್ಲಾ ಸಹೋದರಿಯರಿಗೆ ಮದುವೆಯಾಗಿರುತ್ತದೆ. ನನ್ನ ವಿವಾಹವಾಗುವಾಗ ನನ್ನ ತಂದೆ ಜೀವಂತವಾಗಿದ್ದರು. 3 ಮತ್ತು 9 ನೇ ಪ್ರತಿವಾದಿಯರು ನನ್ನ ತಂದೆ ತೀರಿದ ನಂತರ ವಿವಾಹವಾಗಿರುತ್ತಾರೆ. ನನ್ನ ತಮ್ಮಂದಿರುವ ಹಾಗೂ ನಾವು ಸೇರಿ ಅವರಿಗೆ ಮದುವೆ ಮಾಡಿರುತ್ತೇವೆ. ಉಳಿದ ಸಹೋದರಿಯರು ದಾವಾ ಸ್ವತ್ತಿನಿಂದ ಎಷ್ಟು ದೂರದಲ್ಲಿ ವಾಸಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಧರಣಮ್ಮ ಮಾತ್ರ ಉಪ್ಪಿನಂಗಡಿಯಲ್ಲಿ ವಾಸವಿದ್ದರು, ಅವರು ಈಗ ಮೃತಪಟ್ಟಿರುತ್ತಾರೆ. ಉಳಿದವರು ಎಲ್ಲರೂ ಅದೇ ಗ್ರಾಮದಲ್ಲಿ ವಾಸವಿದ್ದಾರೆ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)